ವಿರೋಧವಾಗಿಯೇ ಕಾಣುತ್ತಲ್ಲ?'

'ನೀನ್ಯಾಕೆ ಮನೆ ಸಮಾಚಾರ ಕಟ್ಟಿಕೊಂಡು ಅಷ್ಟೊಂದು ಒದ್ದಾಡಬೇಕು?'

'ಕಟ್ಟಿಕೊಂಡು ಅನ್ನಬೇಡಿ. 'ಬಿಡಿಸಿಕೊಳ್ಳಲಾರದೆ' ಅನ್ನಿ ಬೇಕಾದರೆ. ನೀವು ಗಂಡಸರು, 'ನಿಮಗೆ ಮನೆಬಿಟ್ಟು ಬರೋದು ಸುಲಭ. ನಮಗೆ ಹಾಗೆ ಆಗಲ್ಲ.'

'ವಾದ ಬೆಳಸೋದಕ್ಕೆ ಏನು ಬೇಕಾದರೂ ಹೇಳಬಹುದು.'

ಈ ವಿವಾದವನ್ನು ಅಲ್ಲಿಗೇ ಮುಗಿಸುವ ಉದ್ದೇಶದಿಂದ ಹೇಳಿದೆ. ಗಡಿಯಾರ ಹತ್ತು ಗಂಟೆ ತೋರಿಸುತ್ತಿತ್ತು.

'ಈಗೇನು, ನೀನು ಊರಿಗೆ ಹೋಗುವವಳೋ? ಇಲ್ಲವೋ?'

'ಅಪ್ಪ ಬಂದಿದ್ದಾರೆ ಅಂದರೆ ಈಗಲೇ ಓಡಿಬಿಡೋಣ ಅನಿಸುತ್ತೆ. ಆದರೆ ರೇಖಾನ ಮದುವೆ ಸುದ್ದಿ ಎತ್ತಿದರೆ, ಮೈಯೆಲ್ಲ ಉರಿಯುತ್ತೆ. ಅವಳಿಗಿನ್ನೂ ಇಪ್ಪತ್ತು ತುಂಬಿತು. ಆಡಿಕೊಂಡಿರ ಬೇಕಾದ ಹುಡುಗಿಗೆ ಈಗಲೇ ಯಾಕೆ ಮದುವೆ, ಮಕ್ಕಳು ಎಲ್ಲ ಅಂತ?'

'ಹಾಗಿದ್ದರೆ ಬಿಟ್ಟುಬಿಡು.'

'ಆದರೆ ಅಪ್ಪ ಬಂದಿದಾರೆ ಅಂತ ಬರೆದಿದಾಳಲ್ಲ.'

'ಹೋಗು ಹಾಗಿದ್ದರೆ'– ನನ್ನ ಮಾತನ್ನು ಬಹಳ ಲಘುವಾಗಿ ಕಂಡಂತೆ. ಮಧು ನಡೆದುಕೊಂಡದ್ದರಿಂದ ಒಂದು ಕ್ಷಣ ತಡೆದು ಹೇಳಿದೆ– 'ತಂದೆ ಬಂದಿರೋದೇ ಅನುಮಾನ ಅಂತ ಅನಿಸತ್ತೇನು ನಿನಗೆ?'

'ಅನುಮಾನಕ್ಕೆ ಆಸ್ಪದ ಏನಿಲ್ಲ. ತಂದೆ ಊರುಬಿಟ್ಟು ಹನ್ನೆರಡು ವರ್ಷ ಆಗತ್ತೆ. ಊರುಬಿಟ್ಟು ಸ್ವಲ್ಪ ದಿನದಲ್ಲಿ ನನಗೊಂದು ಕಾಗದ ಬರೆದಿದ್ದರು. ಅಲ್ಲಿಂದ ವರ್ಷಕ್ಕೋ, ಆರು ತಿಂಗಳಿಗೋ, ಒಮ್ಮೆ ಬರೀತಿದ್ದರು. ಈಗ ಮೂರು ನಾಲ್ಕು ತಿಂಗಳಾಯ್ತೇನೋ ಜಮೀನ್ದಾರ್ ತಿಮ್ಮಪ್ಪಯ್ಯ ತೀರಿಕೊಂಡು. ಅವನು ತೀರಿಕೊಂಡ ಸುದ್ದಿ ಕೇಳಿದ ಮೇಲೆ, ನನ್ನ ಹೃದಯ ಹೊಕ್ಕಿದ್ದ ಒಂದು ವಿಷದ ಅಲಗು ಕಿತ್ತು ಹಾಕಿದಂತಾಗಿದೆ, ಎಂದು ಬರೆದಿದ್ದರು. ಅವರ ವ್ಯವಹಾರ ಇದ್ದದ್ದೆಲ್ಲ ಅವನ ಹತ್ತಿರವೇ –ಆದ್ದರಿಂದ ಬಂದಿರೋದು ನಿಜ ಇರಲೂಬಹುದು, ಎನಿಸುತ್ತೆ.'

ನಾನು ಎದ್ದು ನಿಂತು ಹೇಳಿದೆ–

'ನಿನ್ನ ಮನೆ ವಿಷಯದಲ್ಲಿ ನನಗೆ ಇಲ್ಲದ ಪ್ರಾಮುಖ್ಯ ಯಾಕೆ ಕೊಡಬೇಕೋ, ನನಗರ್ಥವಾಗ್ತಾ ಇಲ್ಲ. ಅಲ್ಲದೆ ಈ ವಿಷಯದಲ್ಲಿ ನಿನಗೆ ಒಪ್ಪಿಗೆ ಆಗೋ ತರಹ, ನಾನೇನು ಹೇಳಲಿ?'

ಅವಳು ಸುಮ್ಮನೆ ಶೂನ್ಯವನ್ನು ದಿಟ್ಟಿಸುತ್ತಾ ಇದ್ದುದ್ದನ್ನು ನೋಡಿ, ಅವಳ ಗಮನವನ್ನು ನನ್ನ ಕಡೆಗೆ ಸೆಳೆಯುತ್ತಾ ಹೇಳಿದೆ–

'ಮಧು, ನನ್ನ ಅಭಿಪ್ರಾಯದಲ್ಲಿ ಇಲ್ಲಿ ದುಡುಕಬೇಕಾದ್ದು ಏನೂ ಇಲ್ಲ. ನೀನೇ ನಿಮ್ಮ ತಂದೆಗೆ ಒಂದು ಕಾಗದ ಬರಿ. ಅದಕ್ಕೆ ನಿಮ್ಮ ತಂದೆ ಏನು ಉತ್ತರ ಬರೀತಾರೆ ನೋಡಿಕೊಂಡು ಆಮೇಲೆ ಊರಿಗೆ ಹೋಗೋದನ್ನು ಯೋಚನೆ ಮಾಡು.'

ಕಾಗದಗಳನ್ನು ವ್ಯಾನಿಟಿ ಬ್ಯಾಗ್‌ನಲ್ಲಿಡುತ್ತಾ ಕುಳಿತ ಜಾಗದಿಂದ ಏಳುತ್ತಾ, ಮಧು ಹೇಳಿದಳು–

'ನೋಡಿದಿರಾ ಇದೀಗ ಸರಿಯಾದ ಮಾತು, ನನಗೆ ಹೀಗೇಂತ ಹೊಳೀಲೇ ಇಲ್ಲವಲ್ಲ.'

'ಸಮಸ್ಯೇನ ನೇರವಾಗಿ ಎದುರಿಸಬೇಕೇ ಹೊರತು, ಗಾಬರಿಪಟ್ಟುಕೊಂಡರೆ, ಹೇಗೆ?'– ನನ್ನ ಬಗ್ಗೆ ಮಧುಳಿಗೆ ಹೆಚ್ಚಿನ ವಿಶ್ವಾಸ ಮೂಡಿದೆ ಎಂಬ ಅಭಿಮಾನದಿಂದ ಹೇಳಿದೆ.

ನಾನು ಮುಂದೆ ನಡೆದಂತೆ, ಮಧು ನನ್ನ ತೋಳು ಹಿಡಿದು ನಡೆದಳು. ನಾನು ಹೊಟೇಲಿನ